ಪಶ್ಚಿಮ ವಲಯ ವ್ಯಾಪ್ತಿಯ , ಮಲ್ಲೇಶ್ವರಂ ಉಪವಿಭಾಗದ ಸುಬ್ರಮಣ್ಯನಗರ ವಾರ್ಡ್-66ರಲ್ಲಿ
ದಿನಾಂಕ: 25-11-2020ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-66 ಸುಬ್ರಮಣ್ಯನಗರ ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 25-11-2020ರಂದು ವಾರ್ಡ್ ಸಂಖ್ಯೆ: 66ರ ನವೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 66ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

ಸಭೆಗೆ ಹಾಜರಿದ್ದವರು :

| | |
|---|---|
| 1 | ಶ್ರೀಮತಿ ಸರಸ್ವತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-66 ಸುಬ್ರಮಣ್ಯನಗರ |
| 2 | ಶ್ರೀ ಟಿ.ವಿ ಮುಕುಂದನ್, ಸಹಾಯಕ ಅಭಿಯಂತರರು, ವಾರ್ಡ್-66 ಸುಬ್ರಮಣ್ಯನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಶಿವರಾಜು ಮೂರ್ತಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 4 | ಶ್ರೀ ಕೆ ಶ್ರೀನಿವಾಸ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 5 | ಶ್ರೀ ಜಯರಾಂ.ವಿ.ಎಲ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 6 | ಶ್ರೀ ಆರ್ ಬಾಬು, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 7 | ಶ್ರೀ ಸಿ.ಕೆ ಕೃಷ್ಣಯ್ಯ, ನೀರಿನ ಪರಿವೀಕ್ಷಕರು |
| 8 | ಶ್ರೀಮತಿ ಅಮೃತ. ಕೆ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಡಾ॥ ಭಾರತಿ ರವೀಂದ್ರ, ಆರೋಗ್ಯ ಇಲಾಖೆ |
| 10 | ಶ್ರೀ ಎನ್. ನಾಗರಾಜ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀ ಕೆ. ಜಯಮೂರ್ತಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 12 | ಶ್ರೀ ಕೆ. ನಾಗರಾಜ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 13 | ಶ್ರೀ ಹೆಚ್. ಲಿಂಗರಾಜು, ಹಿರಿಯ ಆರೋಗ್ಯ ಪರಿವೀಕ್ಷರು |
| 14 | ಶ್ರೀಮತಿ ಕವಿತ, ಸ.ಇ, ಬಿಡಬ್ಲ್ಯೂಎಸ್ಎಸ್‌ಬಿ |
| 15 | ಶ್ರೀ ಟಿ. ವೆಂಕಟೇಶ್, ಎಲೆಕ್ಟ್ರೀಕಲ್ ಗುತ್ತಿಗೆದಾರರು |
| 16 | ಶ್ರೀ ಸರೋಜಾ, ಡೇ ಕೇರ್ ಸೆಂಟರ್ |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀಮತಿ ಸರಸ್ವತಿ.ಡಿ. ನೋಡಲ್ ಅಧಿಕಾರಿಗಳು ವಾರ್ಡ್-66 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

ಆರೋಗ್ಯ ಇಲಾಖೆ :

- ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳೊಂದಿಗೆ, ಕಂದಾಯ ಪರಿವೀಕ್ಷಕರು, ತೆರಿಗೆ ಪರಿವೀಕ್ಷಕರುಗಳು ಕೋವಿಡ್ ತಪಾಸಣೆಗೆ ಸಹಕರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಕೋವಿಡ್ ತಪಾಸಣೆಗೆ ಮನೆಗಳಿಗೆ ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ತಪಾಸಣೆಗೆ ಹೋಗುವ ಒಂದು ದಿನ ಮುಂಚಿತವಾಗಿ ವಾರ್ಡ್ ಕಮಿಟಿ ಸದಸ್ಯರುಗಳಿಗೆ ತಿಳಿಸತಕ್ಕದ್ದು, ಹಾಗೂ ಸದಸ್ಯರುಗಳೊಂದಿಗೆ ಕೋವಿಡ್ ತಪಾಸಣೆಗೆ ಹೋಗುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
- ತಪಾಸಣೆಗೆ ಹೋಗುವ ಹಿಂದಿನ ದಿನ ಭೂತ್ ಮಟ್ಟದಲ್ಲಿ ಪಾಂಪ್ಲೆಟ್‌ನ್ನು ಹಂಚಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಬ್ರಿಗೇಡ್ ಅಪಾರ್ಟ್‌ಮೆಂಟ್‌ನಲ್ಲಿ ಕೋವಿಡ್ ತಪಾಸಣೆಗೆ ಹೋದಾಗ ಅಲ್ಲಿರುವ ಅಪಾರ್ಟ್‌ಮೆಂಟ್ ಅಧ್ಯಕ್ಷರಾದ ಶ್ರೀ ಚೇತನ್ ರವರು ತಪಾಸಣೆಗೆ ಸಹಕರಿಸುತ್ತಿಲ್ಲವೆಂದು ವೈದ್ಯಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
- ಶ್ರೀ ಜಯಮೂರ್ತಿ. ಸದಸ್ಯರು ಇವರು ಗಾಂಧಿಗ್ರಾಮದಲ್ಲಿರುವ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ ಹಾಗೂ ಬಿ.ಪಿ ಮತ್ತು ಶುಗರ್‌ಗೆ ಸಂಬಂಧಿಸಿದ ಔಷಧಿಗಳು ಸಿಗುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದರು.
- ಶ್ರೀ ಸೋಮಶೇಖರ್, ಆರೋಗ್ಯ ಇಲಾಖೆ ವತಿಯಿಂದ ಕೋವಿಡ್ ಪರೀಕ್ಷೆ ಬಗ್ಗೆ ವಿವರವಾಗಿ ಕೋವಿಡ್ ತಪಾಸಣೆ ಬಗ್ಗೆ ಸಭೆಯಲ್ಲಿ ತಿಳಿಸಿದರು.
- ವಾರ್ಡ್‌ನಲ್ಲಿರುವ ಡೇ ಕೇರ್ ಸೆಂಟರ್‌ಗೆ ಬರುವ ಹಿರಿಯ ನಾಗರೀಕರುಗಳಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಮುಂಬರುವ ಡಿಸೆಂಬರ್ ಮಾಹೆಯಲ್ಲಿ ಕೋವಿಡ್ ಸೋಂಕು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ವಾರ್ಡ್‌ನಲ್ಲಿರುವ ಪ್ರತಿಯೊಬ್ಬ ನಾಗರೀಕರಿಗೂ ಕಡ್ಡಾಯವಾಗಿ ಕೋವಿಡ್ ತಪಾಸಣೆ ನಡೆಸಬೇಕೆಂದು ಶ್ರೀ ಜಯರಾಂ. ಸದಸ್ಯರು ಸಭೆಯಲ್ಲಿ ತಿಳಿಸಿದರು.

ವಿದ್ಯುತ್ ಇಲಾಖೆ

- ವಾರ್ಡಿನ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಬೀದಿದೀಪಗಳ ಬೆಳಕು ತೀರಾ ಕಮ್ಮಿ ಇದ್ದು ಇದರಿಂದ ರಾತ್ರಿ ವೇಳೆಯಲ್ಲಿ ಅಪಘಾತವಾಗುವ ಸಾಧ್ಯತೆ ಇರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

- ವಾರ್ಡಿನ 6ನೇ ಮುಖ್ಯರಸ್ತೆಯ ಇ ಬ್ಲಾಕ್‌ನಲ್ಲಿ ಪೈಪ್‌ಲೈನ್ ನೂತನವಾಗಿ ಅಳವಡಿಸಿ ಮುಂದಕ್ಕೆ ಕೊಳಚೆ ನೀರು ಸರಾಗವಾಗಿ ಹರಿಯಲು ಪೈಪ್ ಅಳವಡಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ

Scanned with CamScanner

ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಸಬ್‌ಲೈನ್ ಕಾಮಗಾರಿಯು ಪೂರ್ಣಗೊಳಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಪೊಲೀಸ್ ಇಲಾಖೆ**

- ಮಾಸ್ಕ್ ಮತ್ತು ಸಮಾಜಿಕ ಅಂತರವನ್ನು ಸಾರ್ವಜನಿಕರಿಂದ ನಿರ್ವಹಣೆ ಮಾಡಿಸಲು ಸೂಕ್ತ ಕ್ರಮತೆಗೆದುಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.
- ಸುಬ್ರಮಣ್ಯನಗರ ವಾರ್ಡಿನ ಸಂಗೊಳ್ಳಿ ರಾಯಣ್ಣ ಪಾರ್ಕ್ ಮುಂದೆ ಸಾರ್ವಜನಿಕರ ವಾಹನಗಳನ್ನು ನಿಲ್ಲಿಸುವುದನ್ನು ನಿಷೇಧಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕಂದಾಯ ಇಲಾಖೆ**

- ಕಂದಾಯ ಇಲಾಖೆಯ ಕಂದಾಯ ಪರಿವೀಕ್ಷಕರುಗಳಿಗೆ ಬಾಕಿ ಇರುವ ಹಿಂದಿನ ಕಂದಾಯವನ್ನು ವಸತಿ ಮತ್ತು ವಾಣಿಜ್ಯ ಕಟ್ಟಡಗಳ ಮಾಲೀಕರಿಂದ ತೆರಿಗೆ ವಸೂಲಿ ಮಾಡಲು ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಬಿಬಿಎಂಪಿ ಇಂಜಿನಿಯರಿಂಗ್ ವಿಭಾಗ**

- ಸುಬ್ರಮಣ್ಯನಗರ ವಾರ್ಡಿನ ಗರಡಿ ಮನೆ ಹಿಂಭಾಗದಲ್ಲಿ ರಸ್ತೆ ಚರಂಡಿ ಕೆಲಸವು ಪ್ರಗತಿಯಲ್ಲಿದ್ದು, ಚರಂಡಿ ನೀರು ಸರಿಯಾಗಿ ಹರಿದುಹೋಗಲು ಸಾಧ್ಯವಾಗದ ಕಾರಣ ಮಳೆ ನೀರು ಕೊಯಿಲು ನಿರ್ಮಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಸುಬ್ರಮಣ್ಯನಗರ ವಾರ್ಡಿನ ಡೇ ಕೇರ್ ಸೆಂಟರ್‌ನಲ್ಲಿ 3 ಅಂತಸ್ತಿನ ಕಟ್ಟಡವಿದ್ದು, ಸಾರ್ವಜನಿಕರಿಗೆ ಹಾಗೂ ಹಿರಿಯ ನಾಗರೀಕರಿಗೆ ಸುಗಮವಾಗಿ ಹತ್ತಿಹಿಳಿಯಲು ಲಿಫ್ಟ್‌ನ್ನು ಅಳವಡಿಸಲು ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ವಾರ್ಡಿನ ಸುತ್ತ ಬಿದ್ದಿರುವ ಗುಂಡಿಗಳಿಗೆ ಫಾಟ್‌ಹೋಲ್ ಮುಚ್ಚಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಕ್ರಮತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್–66
ಸುಬ್ರಮಣ್ಯನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

**ಅಧ್ಯಕ್ಷರು**
**ನೋಡಲ್ ಅಧಿಕಾರಿಗಳು, ವಾರ್ಡ್–66**
**ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**

Scanned with CamScanner